## ಇರುವೆ ಗೂಡು



ಭಿನ್ನತೆ ನೋಡಿ! ಇಲ್ಲಿರುವ ಎರಡೂ ಗೂಡುಗಳನ್ನು ಇರುವೆಗಳು ನಿರ್ಮಿಸಿಕೊಂಡಿವೆ. ಒಂದು ಗೋಪುರದ ಆಕಾರದಲ್ಲಿದ್ದು ಕೋಟೆಯ ಬುರುಜುನ್ನು ನೆನಪಿಸುತ್ತದೆ. ಮತ್ತೊಂದು ಗೂಡನ್ನು ಗುಹೆಯ ಆಕಾರದಲ್ಲಿ ರಚನೆ ಮಾಡಿಕೊಂಡಿವೆ. ತಾವು ಯಾರಿಗೇನು ಕಡಿಮೆ ಇಲ್ಲ ಎಂದು ತೋರಿಸಿಕೊಂಡಿವೆ.

**ಚಿತ್ರ- ಬರಹ: ವಿಜಯಕುಮಾರ ಜೆ., ಹರಪನಹಳ್ಳಿ**

## ಸುಪಾರ್ಶ್ವ ಗುಹೆಯೊಳಗೆ..




ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಶ್ರೀ ಕ್ಷೇತ್ರ ಕಮಲಶಿಲೆಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿರುವ ಗುಹೆಯೊಂದು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತದೆ. ಸುಪಾರ್ಶ್ವ ಎಂಬ ರಾಜನೊಬ್ಬ ಈ ಗುಹೆಯಲ್ಲಿ ತಪಸ್ಸು ಮಾಡಿದ್ದರಿಂದ ಇದು ಸುಪಾರ್ಶ್ವ ಗುಹೆಯೆಂದು ಹೆಸರಾಗಿದೆ. ನೆಲದಡಿಯ ಜಂಬಿಟ್ಟಿಗೆ ಕಲ್ಲೊಳಗಿನ ಈ ಗುಹೆಯೊಳಗೆ ಎಲ್ಲೆಡೆ ಕತ್ತಲೋ ಕತ್ತಲು. ಟಾರ್ಚಿನ ಬೆಳಕಲ್ಲಿ ಮೆಲ್ಲನೆ ಒಳಗಿಳಿದರೆ ಎಡ ಪಾರ್ಶ್ವದಲ್ಲಿ ಮೂರು ಲಿಂಗಗಳಿವೆ. ಬಲಭಾಗದಲ್ಲಿ ಜಿನುಗುವ ನೀರಿನಿಂದ ಹುಟ್ಟಿದ ಪುಟ್ಟ ತೊರೆ ನಾಗತೀರ್ಥವೇ ಕಮಲಶಿಲೆಯ ಕುಬ್ಜ ನದಿಯ ಮೂಲವೆಂದು ಹೇಳಲಾಗುತ್ತಿದೆ. ಮತ್ತೂ ಒಳಸಾಗಿದಂತೆ ಎದುರಾಗುವ ನಾಗಸನ್ನಿಧಿಯಲ್ಲಿ ನೂರಾರು ಬಾವಲಿಗಳ ದರ್ಶನವಾಗುತ್ತದೆ. ಒಮ್ಮೆಲೆ ಟಾರ್ಚಿನ ಬೆಳಕನ್ನು ಆರಿಸಿದಾಗ ಅವುಚಿಕೊಳ್ಳುವ ಕಾರ್ಗತ್ತಲು ಅಂಧತ್ವದ ಅನುಭವ ನೀಡುವುದರೊಂದಿಗೆ ಬೆಳಕಿನ ಮಹತ್ವವನ್ನು ಸಾರಿ ಹೇಳುತ್ತದೆ!

**ಚಿತ್ರ- ಬರಹ: ಡಾ.ಮುರಳೀಧರ ಕಿರಣಕೆರೆ, ಶಿವಮೊಗ್ಗ**

## ಕಲಬುರಗಿ ವಿವಿ ಉದ್ಯಾನವನ



ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ಆಡಳಿತ ಕಚೇರಿ ಕಟ್ಟಡದ ಮುಂದೆ 5 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗಿರುವ ಉದ್ಯಾನವನವಿದು. ಇದಕ್ಕೆ ಇಂಬು ನೀಡುವಂತೆ ಇದೀಗ ಆನೆ, ಜಿರಾಫೆ, ಮತ್ತು ಡೈನೋಸಾರಗಳ ಪ್ರತಿಕೃತಿಗಳನ್ನು ನಿರ್ಮಿಸಲಾಗಿದ್ದು ಇವು ನೈಜವೇನೋ ಎಂಬಷ್ಟು ಸುಂದರವಾಗಿವೆ. ಮಕ್ಕಳಿಗೆ ಖುಷಿಯೋ ಖುಷಿ. ಹೀಗಾಗಿ ನಿತ್ಯವೂ ಭೇಟಿ ನೀಡುವವರ ಸಂಖ್ಯೆ ಏರುಗತಿಯಲ್ಲಿದೆ ಎನ್ನುತ್ತಾರೆ ಉದ್ಯಾನ ಉಸ್ತುವಾರಿ ಅಧಿಕಾರಿ ಶ್ರೀ ಶಂಕರ ವೈದ್ಯ, ಎಳ್ಳಾಮಾವಾಸೆಯ ದಿನದಂದು ಇಲ್ಲಿಗೆ ದಾಖಲೆ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ.

**-ವೆಂಕಟೇಶ ಮುದಗಲ್, ಕಲಬುರಗಿ**

## ಬೆತ್ತದ ಗಿಲಕಿ



ಮಕ್ಕಳಿಗಾಗಿ ಈಗ ಪ್ಲಾಸ್ಟಿಕ್‌ನಿಂದ ತಯಾರಿಸಿದ ಹಲವಾರು ರೀತಿಯ ಬಣ್ಣದ ಗಿಲಕಿಗಳು ಬಂದಿವೆ. ಆದರೆ ಈ ಸುಂದರ ಗಿಲಕಿಯು ಪ್ಲಾಸ್ಟಿಕ್ ನ ಕಲ್ಪನೆಯೇ ಇಲ್ಲದ ಕಾಲದಲ್ಲಿ ಬೆತ್ತದಿಂದ ವಿನ್ಯಾಸಗೊಂಡಿದೆ. ಇದರ ಒಳಗೆ ಸಣ್ಣ ಕಲ್ಲುಗಳು ಅಥವಾ ಗುಲಗಂಜಿ ಹಾಕಿ ಅಲ್ಲಾಡಿಸಿದರೆ ಹಿತವಾದ ಶಬ್ದವನ್ನುಂಟು ಮಾಡುತ್ತದೆ. ಇದು ಹರಿಹರದ ಸಾಹಿತಿ ಲಲಿತಮ್ಮ ಚಂದ್ರಶೇಖರ್ ಅವರ ಮನೆಯಲ್ಲಿದೆ.

**-ಸೀತಾ ಎಸ್.ನಾರಾಯಣ, ಹರಿಹರ**

## ಚಿಪ್ಪಿನ ಗೂಡುದೀಪ

ಮಂಗಳೂರಿನ ಕುದ್ರೋಳಿ ದೇವಸ್ಥಾನದಲ್ಲಿ ನಡೆದ ಗೂಡುದೀಪ ಸ್ಪರ್ಧೆಯಲ್ಲಿ ಕಂಡು ಬಂದ ವಿಶಿಷ್ಟ ಗೂಡುದೀಪ. ಗದ್ದೆಗಳಲ್ಲಿ ಸಿಗುವ ಶಂಖ ಚಿಪ್ಪು (ನರ್ತೆ)ಗಳಿಂದ ಈ ಗೂಡುದೀಪ ತಯಾರಿಸಿದವರು ಹೇಮಂತ್ ಕೋಡಿಕಲ್. ಇದಕ್ಕಾಗಿ ಅವರು 3942 ಚಿಪ್ಪುಗಳನ್ನು ಬಳಸಿದ್ದಾರೆ. ಈ ಗೂಡುದೀಪ ರಚನೆಗೆ ಅವರಿಗೆ ತಗಲಿದ ಸಮಯ 3 ತಿಂಗಳು. ಹಿಂದೊಮ್ಮೆ ಅವರು 4800 ಗೋಲಿಗಳಿಂದ ತಯಾರಿಸಿದ ಗೂಡುದೀಪಕ್ಕೆ ರಾಜ್ಯ ಮಟ್ಟದ ಪ್ರಶಸ್ತಿಯೂ ಲಭಿಸಿತ್ತು.

**-ಗಾಯತ್ರಿ ನಾಯಕ್, ಮಂಗಳೂರು**



## ನವ್ಯ ಕಲಾಕೃತಿಗಳು

ಹಂಪಿಯ ಕನ್ನಡ ವಿ.ವಿ.ಯ ದೃಶ್ಯ ಕಲಾ ವಿಭಾಗದಲ್ಲಿ ಸಮಕಾಲಿನ ಶಿಲ್ಪಕಲಾ ಕೃತಿಗಳನ್ನು ನೋಡಿ ನಲಿಯಬಹುದು. ಕೈಯಲ್ಲಿ ಬಾಳೆಹಣ್ಣು ಹಿಡಿದಿರುವ ಶಿಲ್ಪ ಪ್ರೊ.ಚಂದ್ರಶೇಖರ ಪಾಟೀಲರ ನಾಟಕ 'ಟಿಂಗರ ಬುಡ್ಡಣ್ಣ'ನ ಪಾತ್ರವಾಗಿದೆ. ಮತ್ತೊಂದು ನವ್ಯ ಕಲಾಕೃತಿ, ಸಾಂಸ್ಕೃತಿಕ ಲೋಕದ ಪಲ್ಲಟಗಳು, ತಲೆಕೆಳಗಾದರೂ ಸಮಚಿತ್ತ ಉಳಿಸಿಕೊಂಡ ಮನುಷ್ಯನ ಕೃತಿ. ಇವೆರಡೂ ಕೃತಿಗಳನ್ನು ಕಟ್ಟಿಗೆಯ ತುಂಡಿನಿಂದ ನಿರ್ಮಿಸಲಾಗಿದೆ. ನವ್ಯ ಶಿಲ್ಪಿಗಳು ತಮ್ಮ ಅನಿಸಿಕೆಯ ಅಭಿವ್ಯಕ್ತಿಯನ್ನು ಪ್ರಚುರ ಪಡಿಸುವ ಒಂದು ಸಂಕ್ಷಿಪ್ತ ಮಾದರಿ ಇದು ಎನ್ನಬಹುದು.

**- ಕೆ.ರಾಮಚಂದ್ರ, ಹೊಸಪೇಟೆ**





## ನವಿಲು ಹೊಟ್ಟೆಯಲ್ಲಿ ವಿಭೂತಿ!



ಕಟ್ಟಿಗೆಯಿಂದ ತಯಾರಿಸಲಾದ ಈ ನವಿಲು ಆಕೃತಿಯ ವಿಭೂತಿ ಪೆಟ್ಟಿಗೆಯು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಆರೂಢನಂದಿಹಾಳ ಗ್ರಾಮದ ಶ್ರೀಗುರು ತಿಪ್ಪಣ್ಣಾರೂಢರ ಕಾಲದಿಂದಲೂ ಇದೆ. ನವಿಲು ರೆಕ್ಕೆಗಳನ್ನು ತೆರೆದು ಅದರಲ್ಲಿ ವಿಭೂತಿ ಇಟ್ಟು ನಂತರ ಅದನ್ನು ಮುಚ್ಚಬಹುದಾಗಿದೆ. ತಿಪ್ಪಣ್ಣಾರೂಢರು 1983ರಲ್ಲಿ ಕಾಲವಾದರು. ಈಗಲೂ ಶ್ರೀ ಮಠದಲ್ಲಿ 50 ವರ್ಷಗಳ ಹಿಂದಿನ ಈ ವಿಭೂತಿ ಪೆಟ್ಟಿಗೆಯನ್ನು ಕಾಣಬಹುದು.

**-ಗುರುರಾಜ ಬ.ಕನ್ನೂರ, ಬಸವನ ಬಾಗೇವಾಡಿ**